ಕರ್ನಾಟಕ ಸರ್ಕಾರ

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ ಬೆಂಗಳೂರು- 09

ಸಂಖ್ಯೆ:ಎಂ.ಡಿ.ಎಕ್ಸ್(2)/574/2017-18 ದಿನಾಂಕ: 24-01-2018

ರವರಿಗೆ,

ಸಭಾಪತಿಯವರಿಗೆ ವೈದ್ಯಕೀಯ ಮಂಡಳಿ,
ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು
ಕೆ.ಆರ್ ಆಸ್ಪತ್ರೆ, ಮೈಸೂರು
ಬಿಮ್ಸ್, ಬೆಳಗಾಂ.
ಜಿಮ್ಸ್, ಗುಲ್ಬರ್ಗಾ.

E.M.S.

ವಿಷಯ: ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು ವರ್ಗಾವಣೆ ಆದಯತೆ ಸಂಬಂಧ "ತೀವ್ರ ಅನಾರೋಗ್ಯದಿಂದ ಬಳಲುತ್ತಿರುವ" ಶಿಕ್ಷಕರು ಮತ್ತು ಅವರ (ಪತಿ ಅಥವಾ ಪತ್ನಿ, ಮಕ್ಕಳು) ಅವಲಂಬಿತರ ಪ್ರಕರಣಗಳಿಗೆ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ನೀಡಲು ಮತ್ತು ವಿಭಾಗ ಮಟ್ಟದ ತ್ರಿ-ಸದಸ್ಯ ಸಮಿತಿ ರಚಿಸಿ ವೈದ್ಯಕೀಯ ಪ್ರಮಾಣ ಪತ್ರ ನೀಡಲು ನಿರ್ದೇಶನ ನೀಡುವಂತೆ ಕೋರಿ.

ಉಲ್ಲೇಖ: ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಪತ್ರ ಸಂ: ಸಿ3(7)ಪ್ರಾ.ಶಿ:ವರ್ಗ:ವೈ.ತ:01/2017-18, ದಿ:06-01-2018.

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಶಿಕ್ಷಕರ ವರ್ಗಾವಣೆ ನಿಯಮಗಳಲ್ಲಿ ಅತ್ಯಂತ ತೀವ್ರತರಹದ ಖಾಯಿಲೆ **(TERMINALLY ILL)** ಗಳಿಗೆ (ಕ್ಯಾನ್ಸರ್, ಕಿಡ್ನಿ ವೈಫಲ್ಯ, ಹೃದಯ ಸಂಬಂಧಿ ಹೆಚ್.ಐ.ವಿ ಖಾಯಿಲೆಗಳಿಗೆ ಮಾತ್ರ) / ಶಿಕ್ಷಕರಿಗೆ / ಅವಲಂಬಿತರಿಗೆ / ಅಂಗವಿಕಲಶಿಕ್ಷಕರಿಗೆ / ವಿಭಾಗೀಯ ಮಟ್ಟದಲ್ಲಿ ವೈದ್ಯಕೀಯ ಮಂಡಳಿಯಿಂದ ಪಡೆದ ವೈದ್ಯಕೀಯ ತಪಾಸಣೆ ನಡೆಸಿ, ತೀವ್ರತರ ಖಾಯಿಲೆಯಿಂದ ಬಳಲುತ್ತಿರುವ / ಶಿಕ್ಷಕರಿಗೆ ವೈದ್ಯಕೀಯ ಮಂಡಳಿಯಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರಗಳನ್ನು ನೀಡಿ ಸದರಿ ವೈದ್ಯಕೀಯ ವರದಿಗಳ ಸತ್ಯಾಸತ್ಯತೆಯನ್ನು ಮತ್ತು ಖಾಯಿಲೆಯ ಸ್ವರೂಪವನ್ನು ಮರು ಪರಿಶೀಲಿಸಿ ಧೃಡೀಕರಿಸುವಂತೆ ಉಲ್ಲೇಖ ಕೋರಿರುತ್ತಾರೆ. (ಪತ್ರದ ಪ್ರತಿಗಳನ್ನು ಲಗತ್ತಿಸಿದೆ.)

ಆದುದರಿಂದ ಸದರಿ ಶಿಕ್ಷಕರಿಗೆ ಸಂಬಂಧಿಸಿದ ದಾಖಲಾತಿಗಳನ್ನು ಮರು ಪರಿಶೀಲಿಸಿ ವೈದ್ಯಕೀಯ ತಪಾಸಣೆಗೊಳಪಡಿಸಿ ಸಲ್ಲಿಸಿರುವ ಪ್ರಮಾಣ ಪತ್ರಗಳ ಸತ್ಯಾಸತ್ಯತೆಯ ಬಗ್ಗೆ, ಮತ್ತು ಖಾಯಿಲೆಯ ಬಗ್ಗೆ ವರದಿಯನ್ನು ನೀಡಲು ಕೋರಲಾಗಿದೆ. ನೌಕರಿಗೆ / ಅವಲಂಬಿತರಿಗೆ ಆಯಾ ವಿಭಾಗೀಯ ಮಟ್ಟದಲ್ಲಿ ಸೀಮಿತ ಅವಧಿಗೆ ಮಾತ್ರ ವೈದ್ಯಕೀಯ ಮಂಡಳಿ ರಚಿಸಿ ಉಲ್ಲೇಖ ಪತ್ರದಲ್ಲಿ ಸೂಚಿಸಿರುವಂತೆ ಆರೋಗ್ಯ ತಪಾಸಣೆಗೊಳಪಡಿಸಿ ವರದಿಯನ್ನು ಆದ್ಯತೆಯ ಮೇಲೆ, ಜರೂರಾಗಿ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ನೃಪತುಂಗ ರಸ್ತೆ, ಬೆಂಗಳೂರು-01 ಇವರಿಗೆ ಕಳುಹಿಸಲು ಸೂಚಿಸಿದೆ.

ಸಹ ನಿರ್ದೇಶಕರು (ವೈದ್ಯಕೀಯ)
ಆರೋಗ್ಯ ಮತ್ತು ಕು ಕ ಸೇವೆಗಳು,
ಬೆಂಗಳೂರು.

ಪ್ರತಿಯನ್ನು:

1) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತೊಂಗ ರಸ್ತೆ, ಬೆಂಗಳೂರು-01